# ರೋಪ್ ವಾಕಿಂಗ್ ಪ್ರಿಯ ಕ್ವಿಜಾನೊ



ಅಮೆರಿಕದಿಂದ ಬಂದ ಕ್ವಿಜಾನೊ

ಚಿತ್ರ: ಎಸ್.ಕೆ. ದಿನೇಶ್

ಕೆಲವು ವಿದೇಶೀಯರಿಗೆ ಸರ್ಕಸ್, ಸಾಹಸ, ಕಸರತ್ತುಗಳಲ್ಲಿ ಅಪರಿಮಿತ ಒಲವು. ಸತತ ಪ್ರಯತ್ನಗಳಿಂದ ಸಾಹಸಮಯ ಕಸರತ್ತುಗಳನ್ನು ರೂಢಿಸಿಕೊಳ್ಳಬಹುದು. ಅಂತೆಯೇ ಅಮೆರಿಕದ ಕ್ಯಾಲಿಫೋರ್ನಿಯದಿಂದ ಬಂದ ಕ್ವಿಜಾನೊಗೆ ಹಗ್ಗದ ಮೇಲಿನ ನಡಿಗೆ ಮಾಡುವ ಸಾಹಸದ ಹುಚ್ಚು.

ಕ್ವಿಜಾನೊ ಫ್ಲೋರ್ಸ್ 2012ರಲ್ಲಿ ಭಾರತಕ್ಕೆ ಬಂದವರು. ಕ್ಯಾಲಿಫೋರ್ನಿಯಾದಿಂದ ಬಂದ ಇವರು ಇಲ್ಲಿ ಖಾಸಗಿ ಕಂಪೆನಿಯೊಂದನ್ನು ಸ್ಥಾಪಿಸಿದ್ದಾರೆ. ನಗರದ ಹೊರ ವಲಯದಲ್ಲಿ ವಾಸವಿರುವ ಕ್ವಿಜಾನೊ ವಾರಾಂತ್ಯದಲ್ಲಿ ಸ್ನೇಹಿತರ ಜತೆಗೆ ಕಾಲ ಕಳೆಯುತ್ತಾರೆ.

ಜೀವನದಲ್ಲಿ ಹೊಸ ಕೆರಿಯರ್ ಆರಂಭಿಸಬೇಕು, ಸುಂದರ ಬದುಕನ್ನು ರೂಪಿಸಿಕೊಳ್ಳಬೇಕು ಎಂಬ ಮಹತ್ತರ ಉದ್ದೇಶ ಇಟ್ಟುಕೊಂಡು ಬಂದ ಇವರು, ಇದರಿಂದ ಉತ್ತಮ ಜೀವನ ಶೈಲಿ ನಿರ್ವಹಣೆ ಸಾಧ್ಯ ಎಂಬುದನ್ನು ಕಂಡುಕೊಂಡಿದ್ದಾರೆ. ಜೀವನದಲ್ಲಿ ಕ್ರಮಬದ್ಧತೆ, ಶಿಸ್ತು ಬೆಳೆಸಿಕೊಂಡ ಕ್ವಿಜಾನೊ ಬೆಳಿಗ್ಗೆ ನಿತ್ಯವೂ 5.30ಗೆ ಏಳುತ್ತಾರಂತೆ. ಎದ್ದು ವ್ಯಾಯಾಮ ಮಾಡಿ ಪ್ರಾಣಾಯಾಮ, ಧ್ಯಾನದಿಂದಲೇ ಇವರ ದಿನಚರಿ ಆರಂಭವಂತೆ. ಯೋಗಾಭ್ಯಾಸ ತಪ್ಪದೆ ಮಾಡುತ್ತಾರೆ. ಅದಾಗಿ ಎಲೆಕ್ಟ್ರಿಕ್ ಸೈಕ್ಲಿಂಗ್ ಮಾಡುವುದು.. ಹೀಗೆ ಉತ್ತಮ ಆರೋಗ್ಯ ನಿರ್ವಹಣೆಗೆ ಬೇಕಾದ ಎಲ್ಲ ಕಸರತ್ತುಗಳನ್ನು ಬೆಳಿಗ್ಗೆಯೇ ಪೂರೈಸುತ್ತಾರಂತೆ.

ಹತ್ತಿರದ ಹಳ್ಳಿಗಳಿಗೆ ಹೋಗಿ ಅಲ್ಲಿನ ಜನರಿಗೆ ಇಂಗ್ಲಿಷ್ ಕಲಿಸುವುದು ಕ್ವಿಜಾನೊ ಅವರ ಮತ್ತೊಂದು ಪ್ರಿಯವಾದ ಹವ್ಯಾಸ. ಇದಕ್ಕಾಗಿ ಅವರು ದಿನದ ಸ್ವಲ್ಪ ಸಮಯವನ್ನಾದರೂ ಮೀಸಲಿಡುತ್ತಾರೆ. 'ಜನರನ್ನು ಸುಶಿಕ್ಷಿತರನ್ನಾಗಿ ಮಾಡುವುದು, ಅವರೊಂದಿಗೆ ಬೆರೆಯುವುದು, ಅವರಿಂದಲೂ ಸಾಕಷ್ಟು ವಿಚಾರಗಳನ್ನು ತಿಳಿದುಕೊಳ್ಳುವುದು ಮನಸ್ಸಿಗೆ ತೃಪ್ತಿ ನೀಡುತ್ತದೆ. ಜತೆಗೆ ಪ್ರಕೃತಿಗೆ ಹತ್ತಿರವಾಗಿರುವುದು ಜೀವನಶೈಲಿ ನಿರ್ವಹಣೆಗೆ ಸಹಕಾರಿ' ಎನ್ನುವ ಇವರು, 'ಇದೇ ಕಾರಣಕ್ಕೆ ನಗರದಿಂದ ಬಹಳ ದೂರ ಉಳಿದಿರುವುದು' ಎಂದು ಹೇಳುತ್ತಾರೆ.

## ಭಾನುವಾರ ಹಗ್ಗದ ಮೇಲೆ ನಡಿಗೆ

ಹಗ್ಗದ ಮೇಲಿನ ನಡಿಗೆ (ರೋಪ್ ವಾಕಿಂಗ್) ಕ್ವಿಜಾನೊ ಇಷ್ಟಪಡುವ ಮತ್ತೊಂದು ಸಾಹಸ. ಪ್ರತಿ ಭಾನುವಾರ ಕಬ್ಬನ್‌ಪಾರ್ಕ್‌ಗೆ ಬಂದು ಹಗ್ಗದ ಮೇಲೆ ಕಸರತ್ತು ಮಾಡುತ್ತಾರೆ. 'ಹಗ್ಗದ ಮೇಲೆ ನಡಿಗೆ ಮಾಡುವವರ ಸಂಖ್ಯೆ ಇಲ್ಲಿ ಬಹಳ ಕಡಿಮೆ ಇದೆ. ಅವರ ಜತೆಗೆ ಈ ವಿದ್ಯೆಯನ್ನು ಅಭ್ಯಾಸ ಮಾಡಿದೆ. ಈ ಸಾಹಸವನ್ನು ಸರ್ಕಸ್ ಕಲಾವಿದರು ಸರಾಗವಾಗಿ ಮಾಡುತ್ತಾರೆ. ಎಲ್ಲೋ ಒಮ್ಮೆ ಸರ್ಕಸ್‌ನಲ್ಲಿ ಈ ಹಗ್ಗದ ನಡಿಗೆ ನೋಡಿದ್ದೆ. ಅದರಿಂದ ಪ್ರೇರಿತನಾಗಿ ಇದನ್ನು ಅಭ್ಯಾಸ ಮಾಡಲಾರಂಭಿಸಿದೆ. ಈಗ ಈ ವಿದ್ಯೆ ಸಲೀಸು. ಜತೆಗೆ ಮನಸ್ಸಿಗೆ ಬಹಳ ಖುಷಿಯನ್ನೂ ಕೊಡುತ್ತದೆ' ಎಂದು ಹೇಳುತ್ತಾರೆ ಕ್ವಿಜಾನೊ.

ಮಧ್ಯಾಹ್ನ ಊಟಕ್ಕೂ ದೋಸೆಯನ್ನೇ ಇಷ್ಟಪಡುವ ಕ್ವಿಜಾನೊ, ಮುದ್ದೆ ಸಾಂಬಾರ್ ಅನ್ನೂ ಇಷ್ಟಪಟ್ಟು ತಿನ್ನುವ ರೂಢಿ ಮಾಡಿಕೊಂಡಿದ್ದಾರೆ. 'ಇಲ್ಲಿ ಊಟ ತಿಂಡಿಗಳು ಬಹಳ ರುಚಿಯಾಗಿರುತ್ತವೆ, ಊಟದಲ್ಲಿ ವೈವಿಧ್ಯಗಳೂ ವರ್ಣನೆಗೆ ನಿಲುಕದ್ದು' ಎನ್ನುತ್ತಾರೆ ಇವರು.

ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಹುಟ್ಟಿದ ಕ್ವಿಜಾನೊ ಓದಿದ್ದು ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ. 'ಅಲ್ಲಿನ ಸಂಸ್ಕೃತಿಗೂ ಇಲ್ಲಿನದಕ್ಕೂ ಬಹಳ ವ್ಯತ್ಯಾಸವಿದೆ ಎನ್ನುವ ಇವರು ಆಹಾರ, ಉಡುಗೆ, ಜೀವನಶೈಲಿ ಎಲ್ಲದರಲ್ಲೂ ಎರಡು ದೇಶದ್ದು ವಿಭಿನ್ನ ಸಂಸ್ಕೃತಿ. ಇಲ್ಲಿನ ಸಂಸ್ಕೃತಿ, ಸಂಪ್ರದಾಯಗಳನ್ನು ಅಧ್ಯಯನ ಮಾಡಿಕೊಂಡೇ ಇಲ್ಲಿಗೆ ಬಂದಿರುವುದರಿಂದ ಇಲ್ಲಿಗೆ ಹೊಂದಿಕೊಳ್ಳುವುದು ಕಷ್ಟವಾಗಲಿಲ್ಲ. ಎಲ್ಲವೂ ಸುಗಮವಾಗಿ ಸಾಗುತ್ತಿದೆ' ಎಂಬುದು ಕ್ವಿಜಾನೊ ನುಡಿಗಳು.

'ಪ್ರಕೃತಿಯನ್ನು ಬಹಳ ಇಷ್ಟಪಡುತ್ತೇನೆ. ಇದಕ್ಕಾಗಿ ಹುಬ್ಬಳ್ಳಿ, ಹಂಪಿ, ದಾಂಡೇಲಿ, ತಮಿಳುನಾಡು, ಕೇರಳ ಮುಂತಾದ ಕಡೆ ಪ್ರಕೃತಿ ಪ್ರವಾಸ ಮಾಡಿಕೊಂಡು ಬಂದಿದ್ದೇನೆ. ಕೊಚ್ಚಿ, ಮುನ್ನಾರ್, ಕೊಡೈಕೆನಾಲ್‌ಗಳಿಗೂ ಹೋಗಿ ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿಕೊಂಡಿದ್ದೇನೆ ಎನ್ನುವ ಕ್ವಿಜಾನೊ ಪ್ರಕೃತಿಯ ಮಡಿಲಿನಲ್ಲಿ ನನ್ನನ್ನು ನಾನೇ ಮರೆಯುತ್ತೇನೆ. ಶುದ್ಧ ಗಾಳಿ, ಉತ್ತಮ ಪರಿಸರ, ನಿಸರ್ಗದತ್ತ ಸೌಂದರ್ಯ ಆಸ್ವಾದಿಸಲು ನಿಜಕ್ಕೂ ಖುಷಿಯಾಗುತ್ತದೆ. ಈ ನಿಟ್ಟಿನಲ್ಲಿ ಭಾರತೀಯರು ಅದೃಷ್ಟವಂತರು' ಎಂದು ವಿಶ್ಲೇಷಿಸುತ್ತಾರೆ ಈ ಅಮೆರಿಕನ್ ವ್ಯಕ್ತಿ.

ಪಾಶ್ಚಾತ್ಯ ಸಂಗೀತವನ್ನು ಬಹಳ ಪ್ರೀತಿಸುತ್ತಾರಂತೆ. ಇದಕ್ಕಾಗಿ ಹಲವು ಸೀಡಿಗಳನ್ನು ಖರೀದಿಸಿದ್ದಾರಂತೆ. ಸಂಗೀತ ಕೇಳಲು ಮನಸ್ಸು ಶುದ್ಧವಾಗಿರಬೇಕು. ಸಂಗೀತ ಕೇಳಿದ ಮೇಲೆ ಮನಸ್ಸು ಇನ್ನಷ್ಟು ಪರಿಶುದ್ಧವಾಗುತ್ತದೆ ಎಂಬುದು ಇವರ ಅನಿಸಿಕೆ.

★ ಅವನೀಶ್